**ದಿನಾಂಕ: 09.01.2025ರಂದು ನಡೆದ ಪ್ರಶಾಸನ ಸಮಿತಿ 73ನೇ ಸಭೆಯ ನಡಾವಳಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 73ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 09-01-2025 ಗುರುವಾರ ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಸತ್ಯವತಿ ಎಮ್., ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
3. ಶ್ರೀಮತಿ ಶಶಿಕಲಾ ಸಿ., ಅಧೀನ ಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ – ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
6. ಡಾ. ಬಂಗಾರಮ್ಮ, ಕೆ. ನಂ–126, ಶಾಂತಿನಗರ, ನಾಗರತ್ನಮ್ಮ ಬಡಾವಣೆ, ಶಿವಮೊಗ್ಗ. 577201. – ಸದಸ್ಯರು
7. ಡಾ. ಶಿವಲಿಂಗಯ್ಯ, 'Shrungara' No. 9– 75/3 (20) Kankandy, 'B' BAJAL Post, Mangalore 575007 – ಸದಸ್ಯರು
8. ಶ್ರೀ ಬಸಪ್ಪ ಡೊಂಕಬಳ್ಳಿ, #302/302 ಶ್ರೀನಿಧಿ ನಿಲಯ, ಬೈರಪ್ಪ ಬಿಲ್ಡಿಂಗ್, 4ನೇ ಅಡ್ಡರಸ್ತೆ, ರಾಮಮಂದಿರ ರಸ್ತೆ, ಕೊಡಿಗೆಹಳ್ಳಿ, ಬೆಂಗಳೂರು– 560092 – ಸದಸ್ಯರು
9. ಶ್ರೀ ಹನುಮಂತನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಕುಂಚಿಟಿಗರ ಮಹಾ ಸಂಸ್ಥಾನ ಮಠ (ರಿ.), ನರಸಿಂಹಗಿರಿ ಕ್ಷೇತ್ರ, ಕೊರಟಗೆರೆ, ತುಮಕೂರು – 572129 – ಸದಸ್ಯರು
10. ಶ್ರೀ ನಾರಾಯಣ ಯಾಜಿ ಬಿನ್ ರಾಮ ಯಾಜಿ, ಕೆ.ಹೆಚ್.ಬಿ ಕಾಲೋನಿ, ಪ್ರಭಾತ ನಗರ, ಹೊನ್ನಾವರ, ಉತ್ತರ ಕನ್ನಡ–581334 – ಸದಸ್ಯರು
11. ಶ್ರೀ ವಿಶ್ವನಾಥ ಪಿ. ಹಿರೇಮಠ, ಕುಲಸಚಿವರು, ಕ.ಆ.ಸೇ., ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
2. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
3. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19
4. ಡಾ. ಮುನೀರ್ ಅಹಮ್ಮದ್ ನಂ–403, 38ಎ ಕ್ರಾಸ್, 26ನೇ ಮೇನ್, 9ನೇ ಬ್ಲಾಕ್, ಜಯನಗರ, ಬೆಂಗಳೂರು– 560041 – ಸದಸ್ಯ
5. ಶ್ರೀ ಪ್ರದೀಪ್ ಈಶ್ವರ್, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ–516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ– 562104. – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | ಪ್ರಶಾಸನ ಸಮಿತಿ 72ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ. |
| ಟಿಪ್ಪಣಿ | ಪ್ರಶಾಸನ ಸಮಿತಿ 72ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.09.2024ರಂದು ನಡೆಯಿತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಪ್ರಶಾಸನ ಸಮಿತಿಯ 72ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು. |
| ವಿಷಯ 02 | ಪ್ರಶಿಕ್ಷಣ ಪರಿಷತ್ತಿನ 41ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| ಟಿಪ್ಪಣಿ | ದಿನಾಂಕ: 08.01.2025ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 41ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಪ್ರಶಿಕ್ಷಣ ಪರಿಷತ್ತಿನ 41ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| ವಿಷಯ 03 | ಹಣಕಾಸು ಸಮಿತಿ 48ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| ಟಿಪ್ಪಣಿ | ದಿನಾಂಕ: 29.10.2024ರಂದು ನಡೆದ ಹಣಕಾಸು ಸಮಿತಿ 48ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಹಣಕಾಸು ಸಮಿತಿ 48ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| ವಿಷಯ 04 | ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು- ಈ ಕಾಲೇಜನ್ನು ಬೇರೆ ಸಂಸ್ಥೆಗೆ ವರ್ಗಾಯಿಸುವ ಬಗ್ಗೆ. |
| ಟಿಪ್ಪಣಿ | ಕಾರ್ಯದರ್ಶಿಗಳು, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ(ರಿ) ಶ್ರೀ ಸಿದ್ಧಗಂಗಾ ಮಠ,ತುಮಕೂರು. ಇವರು ಪ್ರಸ್ತಾವನೆ ಸಂಖ್ಯೆ ಎಸ್ ಎಸ್ ಇ ಎಸ್ : 1345/2024-25 ದಿನಾಂಕ: 07.08.2024. ಶ್ರೀ ಸಿದ್ಧಲಿಂಗೇಶ್ವರ ಬಿ.ಎ ಇಂಟಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಕೊರತೆಯಿಂದ ಕಾಲೇಜನ್ನು ಮುಚ್ಚುವ ಬಗ್ಗೆ ಮತ್ತು ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ವೇತನ ಪಾವತಿ ಮಾಡುವ ಬಗ್ಗೆ ನಿರ್ದೇಶನವನ್ನು ಕೋರಿರುತ್ತಾರೆ.<br>ಈ ಕಾಲೇಜಿನ ಕುರಿತು ವರದಿಯನ್ನು ನೀಡಲು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ: 27.11.2024 ರಂದು ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಿದೆ.<br>ಸಮಿತಿಯು ಭೇಟಿ ನೀಡಿದ ಸಮಯದಲ್ಲಿ ಕಾಲೇಜಿನ ಎಲ್ಲಾ ಸಿಬ್ಬಂದಿಗಳು ಮನವಿಯನ್ನು ಸಲ್ಲಿಸಿದ್ದು, ಮನವಿಯಲ್ಲಿ ಎಲ್ಲಾ ಉಪನ್ಯಾಸಕರು ಹಿಂದಿನ ವರ್ಷಗಳಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ (NEP) ಅನ್ವಯ ದಾಖಲಾತಿ ಮಾಡಿಕೊಳ್ಳಲು ತಾಂತ್ರಿಕ ತೊಡಕಾಗಿತ್ತು. ಪ್ರಸ್ತುತ ರಾಜ್ಯ ಶಿಕ್ಷಣ ನೀತಿಯಂತೆ (SEP) PUC/ITI/Diplomo ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲಾತಿ ಮಾಡಿಕೊಂಡು ಕಾಲೇಜನ್ನು ಮುರುದುವರೆಸಿಕೊಂಡು ಹೋಗಲು ಅನುಮತಿ ನೀಡಬೇಕೆಂದು ಹಾಗೂ ಆಡಳಿತ ಮಂಡಳಿಯ ಆದೇಶಗಳನ್ನು ತಪ್ಪದೇ ಪಾಲಿಸುತ್ತೇವೆ, ತಪ್ಪಿದ್ದಲ್ಲಿ ನಮ್ಮ ಮೇಲೆ ಶಿಸ್ತುಕ್ರಮವನ್ನು ಜರುಗಿಸಬಹುದೆಂದು ತಿಳಿಸಿರುತ್ತಾರೆ.<br>ಈ ಮೇಲಿನ ಕಾರಣಗಳನ್ನು ಪರಿಗಣಿಸಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ದಾಖಾಲಾತಿ ಸಂಖ್ಯೆಯನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಒಂದು ವರ್ಷದ ಕಾಲಾವಕಾಶವನ್ನು ನೀಡಬಹುದಾಗಿದ್ದು, ಅಲ್ಲಿಯ ವರೆಗೆ ಬೋಧಕ/ಬೋಧಕೇತರ |

| | |
|---|---|
| | ಸಿಬ್ಬಂದಿಗಳನ್ನು ಅದೇ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಕಾಲೇಜುಗಳ ಸಮಾನಾಂತರ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೀಯೋಜನೆ ಮಾಡಬಹುದೆಂದು ಮತ್ತು ಆಗಸ್ಟ್ 2024 ರಿಂದ ತಡೆ ಹಿಡಿದಿರುವ ಸಿಬ್ಬಂದಿಗಳ ವೇತನ ಬಿಡುಗಡೆ ಮಾಡಲು ಸರ್ಕಾರದ ಅನುಮೋದನೆಯನ್ನು ಕೋರಬಹುದಾಗಿದೆ ಎಂದು ಸಮಿತಿಯು ವರದಿಯಲ್ಲಿ ತಿಳಿಸಿರುತ್ತಾರೆ.<br>ಪೀಠಾಧ್ಯಕ್ಷರು, ಶ್ರೀ ಕುಂಚಿಟಿಗರ ಮಹಾ ಸಂಸ್ಥಾನ ಮಠ(ರಿ.), ಶ್ರೀ ನರಸಿಂಹಗಿರಿ ಸುಕ್ಷೇತ್ರ, ಎಲೆರಾಂಪುರ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಹಾಗೂ ಅಧ್ಯಕ್ಷರು, ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ, ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ– ಈ ಎರಡೂ ಸಂಸ್ಥೆಯವರು ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜನ್ನು ತಮ್ಮ ಸಂಸ್ಥೆಗೆ ವರ್ಗಾಯಿಸುವಂತೆ ಪತ್ರವನ್ನು ಬರೆದಿರುತ್ತಾರೆ. ಈ ಬಗ್ಗೆ ಪ್ರಶಾಸನ ಸಮಿತಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿತು. ಕಾಲೇಜನ್ನು ಮುಚ್ಚುವ ಅಥವಾ ಬೇರೆ ಸಂಸ್ಥೆಗೆ ವರ್ಗಾಯಿಸಲು ಸರ್ಕಾರದ ಅನುಮೋದನೆಯ ಅವಶ್ಯಕತೆಯಿರುತ್ತದೆ. ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು ಇದು ತುಮಕೂರು ವಿಶ್ವವಿದ್ಯಾಲದ ಶೈಕ್ಷಣಿಕ ಸಂಯೋಜನೆ ಹೊಂದಿದ್ದು, ಆಡಳಿತಾತ್ಮಕವಾಗಿ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನದಲ್ಲಿದೆ. ಇದನ್ನು ಮುಚ್ಚುವ ಬಗ್ಗೆ ಕಾರ್ಯದರ್ಶಿಗಳು, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ(ರಿ) ಶ್ರೀ ಸಿದ್ಧಗಂಗಾ ಮಠ, ತುಮಕೂರು ಇವರ ಪ್ರಸ್ತಾವನೆಯ ಮೇರೆಗೆ ವಿಶ್ವವಿದ್ಯಾಲಯವು ರಚಿಸಿದ ಸಮಿತಿಯು ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಒಂದು ವರ್ಷದ ಕಾಲಾವಕಾಶವನ್ನು ನೀಡಬಹುದಾಗಿದೆ ಎಂದು ಶಿಫಾರಸ್ಸು ಮಾಡಿದೆ.<br>ಆದ್ದರಿಂದ, ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯೊಂದಿಗೆ ಸದರಿ ಸಮಿತಿಯ ವರದಿಯನ್ನು ಹಾಗೂ ಕಾಲೇಜಿನ ವರ್ಗಾವಣೆಯ ಕೋರಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ತೀರ್ಮಾನಿಸಿತು. ಮಾನವೀಯತೆಯ ದೃಷ್ಟಿಯಿಂದ ಸದರಿ ಕಾಲೇಜಿನ ಸಿಬ್ಬಂದಿಗಳಿಗೆ ವೇತನ ಬಿಡುಗಡೆ ಮಾಡಲು ಸಭೆಯು ಅನುಮೋದಿಸಿತು. |
| ವಿಷಯ 05 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕೇಂದ್ರ ಕಛೇರಿ ಕಟ್ಟಡದ ಮೇಲೆ Manuscript Museum and Auditorium ನಿರ್ಮಿಸುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕೇಂದ್ರ ಕಛೇರಿ ಕಟ್ಟಡದ ಎರಡನೇ ಮಹಡಿಯು ಅಂದಾಜು 35% ಭಾಗ ಮಾತ್ರ ಕಟ್ಟಡ ನಿರ್ಮಾಣಗೊಂಡಿದ್ದು ಉಳಿದಂತೆ ಅಂದಾಜು 65% ರಷ್ಟು ಖಾಲಿ ಇರುತ್ತದೆ. ಸದರಿ ಖಾಲಿ ಜಾಗದಲ್ಲಿ Development of Sanskrit Manuscript Museum and Auditorium ಅನ್ನು ನಿರ್ಮಾಣ ಮಾಡುವ ಅವಶ್ಯಕತೆ ಇರುತ್ತದೆ. Amadeus Software Labs India Private Limited ಇವರು ಸದರಿ ಕಟ್ಟಡವನ್ನು ಉಚಿತವಾಗಿ ನಿರ್ಮಿಸಲು That's Eco Foundation ಇವರೊಂದಿಗೆ MOU ಮಾಡಿಕೊಂಡು ರೂ. 35,00,000.00ಗಳನ್ನು ಸದರಿ ಸಂಸ್ಥೆಗೆ ಬಿಡುಗಡೆ ಮಾಡಿರುತ್ತಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮೇಲ್ಭಾಗದಲ್ಲಿ Development of Sanskrit Manuscript Museum and Auditorium ಅನ್ನು ಉಚಿತವಾಗಿ ನಿರ್ಮಾಣ ಮಾಡಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದರಿಂದ ವಿಶ್ವವಿದ್ಯಾಲಕ್ಕಾಗಲೀ ಸರ್ಕಾರಕ್ಕಾಗಲೀ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಸದರಿ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕೇಂದ್ರ ಕಛೇರಿ ಕಟ್ಟಡದ ಮೇಲೆ Manuscript Museum and Auditorium ಅನ್ನು ಉಚಿತವಾಗಿ ನಿರ್ಮಿಸಲು ಸಭೆಯು ಅನುಮೋದಿಸಿತು ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಉಚಿತವಾಗಿ ಕಟ್ಟಡ ನಿರ್ಮಿಸುತ್ತಿರುವುದನ್ನು ಸಭೆಯು ಮುಕ್ತ ಕಂಠದಿಂದ ಶ್ಲಾಘಿಸಿತು. |
| ವಿಷಯ 06 | ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇಲೆ ತೆರಳಲು ಕರ್ನಾಟಕ |

| | |
|---|---|
| | ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ. |
| ಟಿಪ್ಪಣಿ | ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇಲೆ ತೆರಳಲು ನಿರಾಕ್ಷೇಪಣಾ ಪತ್ರ ನೀಡಲು ದಿನಾಂಕ: 21.09.2024ರಂದು ನಡೆದ ಪ್ರಶಾಸನ ಸಮಿತಿಯ 72ನೇ ಸಭೆಯಲ್ಲಿ ಬಹುಮತದ ನಿರ್ಣಯ ಕೈಗೊಂಡಿದ್ದು, ಪ್ರಸ್ತುತ ಸದರಿಯವರು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರದ ನಿರ್ದೇಶಕ ಹುದ್ದೆಗೆ ನಿಯೋಜನೆಯ ಮೇರೆಗೆ ನೇಮಕಾತಿಗೊಂಡಿದ್ದರಿಂದ ಸದರಿಯವರನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ ಇದರ ನಿರ್ದೇಶಕ ಹುದ್ದೆಗೆ ಮೂರು ವರ್ಷಗಳ ಅವಧಿಯ ನಿಯೋಜನೆ ಮೇಲೆ ತೆರಳಲು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಲು ಸಭೆಯ ಅನುಮೋದನೆಗೆ ಹಾಗೂ ತದನಂತರ ಸರ್ಕಾರದ ಅನುಮೋದನೆಗೆ ಮಂಡಿಸಲು ಅನುಮತಿ ಕೋರಿದೆ. |
| ನಿರ್ಣಯ | ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿತು ಹಾಗೂ ಈ ಕೆಳಗಿನ ಅಂಶಗಳನ್ನು ಗಮನಿಸಿತು. ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರು ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 5 ಸಭೆಗಳಿಗೆ ನಿರಂತರವಾಗಿ ಗೈರು ಹಾಜರಾಗಿರುತ್ತಾರೆ. ಪ್ರಮುಖ ಹುದ್ದೆಯ ಜವಾಬ್ದಾರಿ ಸ್ಥಾನದಲ್ಲಿದ್ದರೂ ಸಹ ವಿಶ್ವವಿದ್ಯಾಲಯದ ಪ್ರಮುಖ ಸಭೆಗಳಿಗೆ, ಇನ್ನಿತರ ಪ್ರಮುಖ ಕಾರ್ಯಕ್ರಮಗಳಿಗೆ ಹಾಜರಾಗದೇ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುತ್ತಾರೆ. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಿಗೆ ಪದೇ ಪದೇ ವಾಟ್ಸಾಪ್ ಮತ್ತು ಇಮೇಲ್ ಸಂದೇಶಗಳನ್ನು ಕಳುಹಿಸಿ ಆಗ್ರಹಿಸಿರುತ್ತಾರೆ. ನೆನಪೋಲೆಯೆಂಬಂತೆ ಇಮೇಲ್ ಸಂದೇಶ ಕಳುಹಿಸಿ ನಡತೆ ನಿಯಮಗಳಿಗೆ ವಿರುದ್ಧವಾಗಿ ವರ್ತಿಸಿರುತ್ತಾರೆ. ಸದರಿಯವರಿಗೆ ಈ ಹಿಂದೆ ನೀಡಿದ್ದ ನೋಟೀಸ್‌ಗಳಿಗೂ ಸಹ ಸೂಕ್ತ ಉತ್ತರ ನೀಡಿರುವುದಿಲ್ಲ. ಈ ಎಲ್ಲಾ ವಿಷಯಗಳಿಗೂ ಸಂಬಂಧಿಸಿದಂತೆ ಸೂಕ್ತ ಉತ್ತರ ಬಂದ ನಂತರ ಇವರಿಗೆ ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇರೆಗೆ ತೆರಳಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಭೆಯು ಈ ಕೆಳಗಿನ ಷರತ್ತಿಗೊಳಪಟ್ಟು ಅನಮೋದನೆ ನೀಡಿತು.<br>ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ ಇವರು ಮಾನ್ಯ ಕುಲಪತಿಗಳಿಗೆ ಬರೆದ ಪತ್ರಗಳ ಪದ ಪ್ರಯೋಗ ಸಮಂಜಸವಾಗಿಲ್ಲದ್ದರಿಂದ ಆ ಬಗ್ಗೆ ಕ್ಷಮಾಪಣ ಪತ್ರವನ್ನು ನೀಡಬೇಕು. ಮುಂದುವರಿದು, ಪ್ರಶಾಸನ ಸಮಿತಿಯು ಸದರಿಯವರ ವಿರುದ್ಧ ಯಾವುದೇ ರೀತಿಯ ಶಿಸ್ತುಕ್ರಮ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರವನ್ನು ನೀಡಿತು ಹಾಗೂ ಸದರಿಯವರು ಈ ಮೇಲಿನ ಷರತ್ತನ್ನು ಪೂರೈಸಿದ ನಂತರವಷ್ಟೇ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕೆಂದು ಬಹುಮತದ ಆಧಾರದಲ್ಲಿ ಸಭೆಯು ಅನುಮೋದಿಸಿತು.<br>ಆದರೆ, ಸರ್ಕಾರಿ ನೌಕರರನ್ನು ಖಾಸಗಿ ಅನುದಾನಿತ ಸಂಸ್ಥೆಗೆ ನಿಯೋಜನೆಯ ಮೇರೆಗೆ ಕಳುಹಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇರೆಗೆ ತೆರಳಲು ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರನ್ನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸದಸ್ಯ ಕಾರ್ಯದರ್ಶಿಗಳಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರು ತಮ್ಮ ಸ್ಪಷ್ಟವಾದ ಅಸಮ್ಮತಿ ಸೂಚಿಸಿದರು. ಅದೇರೀತಿ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪರವಾಗಿ ಭಾಗವಹಿಸಿದ ಶ್ರೀಮತಿ ಶಶಿಕಲಾ ಸಿ. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಮೊದಲು ಸಮ್ಮತಿಯನ್ನು ಸೂಚಿಸಿ, ತದನಂತರ ತಮ್ಮ ಅಸಮ್ಮತಿಯನ್ನು ಸೂಚಿಸಿರುತ್ತಾರೆ. |
| ವಿಷಯ<br>07 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing the Affilliation of Colleges/Institutions Under the Jurisdiction of Karnataka Samskrit |

| | |
|---|---|
| | **Vishwavidyalaya" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing the Affiliation of Colleges/Institutions Under the Jurisdiction of Karnataka Samskrit Vishwavidyalaya" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ದಿನಾಂಕ: 09.05.2024ರ ಸರ್ಕಾರದ ಪತ್ರದಲ್ಲಿ ಪ್ರಸ್ತುತ ಇರುವ ಕುಲಪತಿಗಳು ಮತ್ತು ಕುಲಸಚಿವರ ಸಹಿಯೊಂದಿಗೆ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಪರಿಷ್ಕೃತ ಪರಿನಿಯಮವನ್ನು ಸಲ್ಲಿಸುವಂತೆ ಸೂಚಿಸಿರುವುದರಿಂದ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕರ್ನಾಟ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing the Affiliation of Colleges/Institutions Under the Jurisdiction of Karnataka Samskrit Vishwavidyalaya" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.** |
| **ವಿಷಯ 08** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "Statutes for Recognition of Certain Institutions for Offering Various Programmes Leading to Award of Degrees, Diplomas, Post Graduate Diplomas and Certificates" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "Statutes for Recognition of Certain Institutions for Offering Various Programmes Leading to Award of Degrees, Diplomas, Post Graduate Diplomas and Certificates" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ದಿನಾಂಕ: 02.12.2024ರ ಸರ್ಕಾರದ ಪತ್ರದಲ್ಲಿ ಪ್ರಸ್ತುತ ಇರುವ ಕುಲಪತಿಗಳು ಮತ್ತು ಕುಲಸಚಿವರ ಸಹಿಯೊಂದಿಗೆ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಪರಿಷ್ಕೃತ ಪರಿನಿಯಮವನ್ನು ಸಲ್ಲಿಸುವಂತೆ ಸೂಚಿಸಿರುವುದರಿಂದ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕರ್ನಾಟ ಸಂಸ್ಕೃತ ವಿಶ್ವವಿದ್ಯಾಲಯದ "Statutes for Recognition of Certain Institutions for Offering Various Programmes Leading to Award of Degrees, Diplomas, Post Graduate Diplomas and Certificates" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.** |
| **ವಿಷಯ 09** | **ಕರ್ನಾಟ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing Rules of Business of The Syndicate the Academic Council, the Finance Committee and the Faculties" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **"Statutes Governing Rules of Business of The Syndicate the Academic Council, the Finance Committee and the Faculties"** ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ದಿನಾಂಕ: 22.11.2024ರ ಸರ್ಕಾರದ ಪತ್ರದಲ್ಲಿ ಪ್ರಸ್ತುತ ಇರುವ ಕುಲಪತಿಗಳು ಮತ್ತು ಕುಲಸಚಿವರ ಸಹಿಯೊಂದಿಗೆ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಪರಿಷ್ಕೃತ ಪರಿನಿಯಮವನ್ನು ಸಲ್ಲಿಸುವಂತೆ ಸೂಚಿಸಿರುವುದರಿಂದ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕರ್ನಾಟ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing Rules of Business of The Syndicate the Academic Council, the Finance Committee and the Faculties" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.** |
| **ವಿಷಯ 10** | **ಕಾಲೇಜುಗಳಿಗೆ ಮಾನ್ಯತೆಯನ್ನು ನವೀಕರಿಸುವ ಬಗ್ಗೆ.** |

**ಟಿಪ್ಪಣಿ**

ಸರ್ಕಾರದ ಆದೇಶದಂತೆ ಎಲ್ಲಾ ಸಂಯೋಜನೆಯ ಪ್ರಸ್ತಾವನೆಗಳನ್ನು UUCMS ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿಯೇ ಸರ್ಕಾರಕ್ಕೆ ಸಲ್ಲಿಸಬೇಕು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು 2025-26ನೇ ಸಾಲಿಗೆ ಸಂಸ್ಕೃತ ಕಾಲೇಜುಗಳ ಮಾನ್ಯತೆ ನವೀಕರಣಕ್ಕಾಗಿ ಹೊಸ ಕೋರ್ಸಿಗೆ ಅನುಮತಿಗಾಗಿ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಿತ್ತು. ಸ್ಥಳೀಯ ಪರಿಶೀಲನಾ ಸಮಿತಿಯು ಆಯಾ ಕಾಲೇಜುಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿ ಸಲ್ಲಿಸಿರುತ್ತಾರೆ. ಮಾನ್ಯತೆ ನವೀಕರಿಸುವ ಸಂಬಂಧ ಅನುಮೋದನೆಗಾಗಿ ಪ್ರಶಾಸನ ಸಮಿತಿಗೆ ಮಂಡಿಸಿದೆ.

| ಕ್ರಸಂ. | ಕಾಲೇಜಿನ ಹೆಸರು |
|---|---|
| 1. | ಶ್ರೀ ಮನ್ಮಹಾರಾಜಾ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು-24 |
| 2. | ಶ್ರೀ ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ,571431 |
| 3. | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು ಮಂಡ್ಯ 571811 |
| 4. | ಶ್ರೀ ಮಲೆಮಹದೇಶ್ವರ ಸಂಸ್ಕೃತ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ |
| 5. | ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು, ಶ್ರೀ ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ, ಖಿಲ್ಲೆಮೊಹಲ್ಲಾ, ಮೈಸೂರು-57000 |
| 6. | ಜೆ. ಎಸ್. ಎಸ್. ಸಂಸ್ಕೃತ ಕಾಲೇಜು,<br>ಸುತ್ತೂರು -571 129, ನಂಜನಗೂಡು ತಾ॥, ಮೈಸೂರು ಜಿ॥ |
| 7. | ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು, ಉಡುಪಿ - 576 10 |
| 8. | ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು. ಉಮ್ಮಚಗಿ, ಯಲ್ಲಾಪುರ ತಾಲೂಕು, ಉತ್ತರ ಕನ್ನಡ ಜಿಲ್ಲೆ - 581 347 |
| 9. | ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಮಠದೇವಳ ಅಂಚೆ -581336 ಶಿರಸಿ ತಾಲ್ಲೂಕು, ಉ.ಕ. ಜಿಲ್ಲೆ |
| 10. | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ - 581 334, ಉ.ಕ. ಜಿಲ್ಲೆ |
| 11. | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು-560018 |
| 12. | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ, ಮುಖ್ಯರಸ್ತೆ, ಬೆಂಗಳೂರು-560 028 |
| 13. | ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ಶ್ರೀದೇಗುಲಮಠ, ಕನಕಪುರ-562117 ರಾಮನಗರ ಜಿಲ್ಲೆ. |
| 14. | ಶ್ರೀ ರುದ್ರೇಶ್ವರ ಸಂಸ್ಕೃತ ಕಾಲೇಜು, ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ - 561203 |
| 15. | ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜು, ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ - |
| 16. | ಶ್ರೀ ವೇದವಿಜ್ಞಾನ ಶೋಧ ಸಂಸ್ಥಾನ (ರಿ) ಸಂಸ್ಕೃತ ಕಾಲೇಜು ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಂಗಳೂರು-562130 |
| 17. | ಪೂರ್ಣಪ್ರಜ್ಞ ವಿದ್ಯಾಪೀಠ ವೇದಾಂತ ಗುರುಕುಲಂ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು-560 028 |
| 18. | ವೇದವಿಜ್ಞಾನ ಮಹಾವಿದ್ಯಾಪೀಠ ವೇದ ಆಗಮ ಸಂಸ್ಕೃತ ಮಹಾ ಪಾಠಶಾಲೆ, ವೇದ ವಿಭಾಗ, ಕನಕಪುರ ರಸ್ತೆ, ಉದಯಪುರ, ಬೆಂಗಳೂರು,560082 |
| 19. | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು -572 104 |
| 20. | ಶ್ರೀ ಫಿರಂಗಿಸ್ವಾಮಿ ಸಂಸ್ಕೃತ ಕಾಲೇಜು, ಅಂಕನಹಳ್ಳಿ ಮಠ, ಕುಣಿಗಲ್ ತಾಲ್ಲೂಕು,<br>ತುಮಕೂರು ಜಿಲ್ಲೆ. |
| 21. | ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜು, ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ |

| | |
|---|---|
| | ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ-577202 |
| 22. | ಶ್ರೀ ಪೂರ್ಣ ಪ್ರಜ್ಞಾ ಸಂಸ್ಕೃತ ಕಾಲೇಜು. ರಾಜೇಂದ್ರ ನಗರ, ಚಿತ್ರದುರ್ಗ |
| 23. | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577217 |
| 24. | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – 587 301 ಬಾಗಲಕೋಟೆ ಜಿಲ್ಲೆ |
| 25. | ಶ್ರೀ ಗಜಾನನ ಸಂಸ್ಕೃತ ಕಾಲೇಜು, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆ |
| 26. | ಸಿ. ಎಲ್. ವೈ. ಸಂಸ್ಕೃತ ಕಾಲೇಜು, ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ, ಧಾರವಾಡ – 580 008. |
| 27. | ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು, ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು |
| 28. | ಶ್ರೀಮದ್ ಆದಿಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳ ಸಂಸ್ಕೃತ ಮತ್ತು ವೇದ ಮಹಾವಿದ್ಯಾಲಯ, ಮಧುರಖಂಡಿ, ಕಮರೀಮಠ, ನಂಧೀಶ್ವರ, ಅಥಣಿ, ಬೆಳಗಾವಿ ಜಿಲ್ಲೆ. |
| 29. | Valmiki College of Vedic Wisdom, Ragihalli, Anekal, Banglore. |

**ನಿರ್ಣಯ**

**UUCMS ಪೋರ್ಟಲ್ ನಲ್ಲಿ 29 ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸಭೆಯು ಅನುಮೋದಿಸಿತು.**

ಮುಂದುವರಿದು, ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸರ್ಕಾರಿ ಸಂಸ್ಕೃತ ಕಾಲೇಜು, ಗೋಕರ್ಣ ಕಾಲೇಜನ್ನು ಸಹ **UUCMS ಪೋರ್ಟಲ್‌ನ Affiliation Module** ನಲ್ಲಿ ಸೇರಿಸಿ ಮಾನ್ಯತೆಗೆ ಅಗತ್ಯ ಕ್ರಮವಹಿಸಲು ಸಭೆಯು ತೀರ್ಮಾನಿಸಿತು.

**Valmiki College of Vedic Wisdom, Ragihalli, Anekal, Banglore – ಈ ಕಾಲೇಜಿನಲ್ಲಿ ಹೊಸದಾಗಿ ಬಿ.ಎಸ್‌ಸಿ (B.SC) in Yogic Science and Conselling ಅನ್ನು 2025-26 ಸಾಲಿನಲ್ಲಿ ಪ್ರಾರಂಭಿಸಲು ಸಲ್ಲಿಸಿರುವ ಅರ್ಜಿಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಿತು.**

**ವಿಷಯ 11**

**ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಪಟ್ಟ ಭತ್ಯೆಗಳನ್ನು ಪರಿಷ್ಕರಿಸಿರುವುದನ್ನು ಅನುಮೋದಿಸುವ ಕುರಿತು.**

**ಟಿಪ್ಪಣಿ**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಪಟ್ಟ ಪ್ರಶ್ನೆಪತ್ರಿಕೆ ತಯಾರಿಕೆ, ಪ್ರಶ್ನೆಪತ್ರಿಕೆ ಪರಿಶೀಲನೆ, ಮಾರ್ಗಾಧಿಕಾರಿಗಳ ಭತ್ಯೆ, ಪರೀಕ್ಷಾ ಕೇಂದ್ರ, ಮೌಲ್ಯಮಾಪನ ಕೇಂದ್ರಗಳಲ್ಲಿನ ಸಿಬ್ಬಂದಿಗಳ ಭತ್ಯೆ & ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ನೀಡುವ ಭತ್ಯೆ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ಆಯೋಜಿಸುವ ಕಾರ್ಯಕ್ರಮ/ತರಬೇತಿಗೆ ಆಗಮಿಸುವ ಅತಿಥಿಗಳು, ವಿಶೇಷೋಪನ್ಯಾಸ, ಸಾಮಾನ್ಯ ಉಪನ್ಯಾಸಕರಿಗೆ ನೀಡುವ ಭತ್ಯೆಗಳನ್ನು ಪರಿಷ್ಕರಿಸುವ ಕುರಿತು ಮಾನ್ಯ ಕುಲಪತಿಗಳು ಉಲ್ಲೇಖದಲ್ಲಿ ಅನುಮೋದನೆಯನ್ನು ನೀಡಿದ್ದು, ಈ ಕೆಳಕಂಡ ಪಟ್ಟಿಯಲ್ಲಿರುವ ಭತ್ಯೆಗಳನ್ನು ಪರಿಷ್ಕರಿಸಲು ಪ್ರಶಾಸನ ಮತ್ತು ಪ್ರಶಿಕ್ಷಣ ಸಮಿತಿ ಸಭೆಗಳಲ್ಲಿ ಅನುಮೋದಿಸಲು ಮಾನ್ಯರಿಗೆ ಸಲ್ಲಿಸಲಾಗಿದೆ.

| (ಅ) | ಪ್ರಶ್ನೆಪತ್ರಿಕೆ ತಯಾರಿಕಾ ಭತ್ಯೆಗಳು | ಪ್ರಸ್ತುತ | ಪರಿಷ್ಕೃತ |
|---|---|---|---|
| 1 | ಪ್ರಶ್ನೆಪತ್ರಿಕೆ ತಯಾರಿಕಾ ಭತ್ಯೆ (ಒಂದು ಪತ್ರಿಕೆಗೆ) – ಪ್ರಥಮಾ/ವೇದ ಪ್ರಥಮಾ | 250 | 300 |
| 2 | ಪ್ರಶ್ನೆಪತ್ರಿಕೆ ತಯಾರಿಕಾ ಭತ್ಯೆ (ಒಂದು ಪತ್ರಿಕೆಗೆ) – ಕಾವ್ಯ/ವೇದ ಪ್ರವೇಶ | 250 | 350 |
| 3 | ಪ್ರಶ್ನೆಪತ್ರಿಕೆ ತಯಾರಿಕಾ ಭತ್ಯೆ (ಒಂದು ಪತ್ರಿಕೆಗೆ) – ಸಾಹಿತ್ಯ/ವೇದ ಮೂಲ | 250 | 400 |
| 4 | ಪ್ರಶ್ನೆಪತ್ರಿಕೆ ತಯಾರಿಕರಿಗೆ ದಿನಭತ್ಯೆ (ಬೆಂಗಳೂರು ಕೇಂದ್ರ) | 250 | 300 |
| 5 | ಪ್ರಶ್ನೆಪತ್ರಿಕೆ ತಯಾರಿಕರಿಗೆ ದಿನಭತ್ಯೆ (ಇತರೆ ಕೇಂದ್ರ) | – | 200 |
| 6 | ಪ್ರಶ್ನೆಪತ್ರಿಕೆ ತಯಾರಿಕರಿಗೆ ಸ್ಥಳೀಯ ಭತ್ಯೆ (ಬೆಂಗಳೂರು ಕೇಂದ್ರ) | 300 | 300 |
| 7 | ಪ್ರಶ್ನೆಪತ್ರಿಕೆ ತಯಾರಿಕರಿಗೆ ಸ್ಥಳೀಯ ಭತ್ಯೆ (ಇತರೆ ಕೇಂದ್ರ) | – | 200 |
| 8 | ಪ್ರಶ್ನೆಪತ್ರಿಕೆ ತಯಾರಿಕರಿಗೆ ಪ್ರಯಾಣ ಭತ್ಯೆ | ಸಾಮಾನ್ಯ ಬಸ್ ದರ | ಸಾಮಾನ್ಯ ಬಸ್ ದರ |
| | **ಪ್ರತೀ ವರ್ಷ ಶೇ 5% ರಷ್ಟು ಹೆಚ್ಚಿಸುವುದು.** | | |

| (ಆ) | ಪ್ರಶ್ನೆಪತ್ರಿಕೆ ಪರಿಶೀಲನಾ ಭತ್ಯೆಗಳು | ಪ್ರಸ್ತುತ | ಪರಿಷ್ಕೃತ |
|---|---|---|---|
| 1 | ಪ್ರಶ್ನೆಪತ್ರಿಕೆ ಪರಿಶೀಲನಾ ಭತ್ಯೆ (ಒಂದು ಪತ್ರಿಕೆಗೆ) | 50 | 75 |
| 2 | ಪ್ರಶ್ನೆಪತ್ರಿಕೆ ಪರಿಶೀಲಕರಿಗೆ ದಿನಭತ್ಯೆ (ಬೆಂಗಳೂರು ಕೇಂದ್ರ) | 250 | 300 |
| 3 | ಪ್ರಶ್ನೆಪತ್ರಿಕೆ ಪರಿಶೀಲಕರಿಗೆ ದಿನಭತ್ಯೆ (ಇತರೆ ಕೇಂದ್ರ) | – | 200 |
| 4 | ಪ್ರಶ್ನೆಪತ್ರಿಕೆ ಪರಿಶೀಲಕರಿಗೆ ಸ್ಥಳೀಯ ಭತ್ಯೆ (ಬೆಂಗಳೂರು ಕೇಂದ್ರ) | 300 | 300 |

| | | | |
|---|---|---|---|
| 5 | ಪ್ರಶ್ನಪತ್ರಿಕೆ ಪರಿಶೀಲಕರಿಗೆ ಸ್ಥಳೀಯ ಭತ್ಯೆ (ಇತರ ಕೇಂದ್ರ) | – | 200 |
| 6 | ಪ್ರಶ್ನೆಪತ್ರಿಕೆ ಪರಿಶೀಲಕರಿಗೆ ಪ್ರಯಾಣ ಭತ್ಯೆ | ಸಾಮಾನ್ಯ ಬಸ್ ದರ | ಸಾಮಾನ್ಯ ಬಸ್ ದರ |
| | ಪ್ರತೀ ವರ್ಷ ಶೇ 5% ರಷ್ಟು ಹೆಚ್ಚಿಸುವುದು. | | |

| (ಇ) | ಮಾರ್ಗಾಧಿಕಾರಿಗಳ ಭತ್ಯೆಗಳು | ಪ್ರಸ್ತುತ | ಪರಿಷ್ಕೃತ |
|---|---|---|---|
| 1 | ಮಾರ್ಗಾಧಿಕಾರಿಗಳ ದಿನಭತ್ಯೆ | 300 | 400 |
| 2 | ಮಾರ್ಗಾಧಿಕಾರಿಗಳ ಸ್ಥಳೀಯ ಭತ್ಯೆ | 250 | 300 |
| 3 | ಮಾರ್ಗಾಧಿಕಾರಿಗಳ ಭತ್ಯೆ (ಬೆಂಗಳೂರು ಮಾರ್ಗ) – ಒಂದು ದಿನಕ್ಕೆ | 800 | 800 |
| 4 | ಮಾರ್ಗಾಧಿಕಾರಿಗಳ ಭತ್ಯೆ (ಇತರೆ ಮಾರ್ಗ) – ಒಂದು ದಿನಕ್ಕೆ | 600 | 800 |
| 5 | ಮಾರ್ಗಾಧಿಕಾರಿಗಳ ಪ್ರಯಾಣ ಭತ್ಯೆ | ಸಾಮಾನ್ಯ ಬಸ್ ದರ | ಸಾಮಾನ್ಯ ಬಸ್ ದರ |
| | ಪ್ರತೀ 3 ವರ್ಷಕ್ಕೆ ಶೇ 5% ರಷ್ಟು ಹೆಚ್ಚಿಸುವುದು. | | |

| (ಈ) | ಪರೀಕ್ಷಾ ಕೇಂದ್ರದಲ್ಲಿ ನೀಡುವ ಭತ್ಯೆಗಳು (ಪ್ರಥಮಾ/ ವೇದ ಪ್ರಥಮ, ಕಾವ್ಯ/ ವೇದ ಪ್ರವೇಶ, ಸಾಹಿತ್ಯ / ವೇದ ಮೂಲ) | ಪ್ರಸ್ತುತ | ಪರಿಷ್ಕೃತ |
|---|---|---|---|
| 1 | ಮುಖ್ಯ ಅಧೀಕ್ಷಕರ ಭತ್ಯೆ (ಒಂದು ದಿನಕ್ಕೆ) | 100 | 150 |
| 2 | ಕೊಠಡಿ ಮೇಲ್ವಿಚಾರಕರ ಭತ್ಯೆ (ಒಂದು ಅಧಿವೇಶನಕ್ಕೆ) | 50 | 60 |
| 3 | ಕಛೇರಿ ಸಹಾಯಕರು (ಒಂದು ದಿನಕ್ಕೆ) | 50 | 75 |
| 4 | "ಡಿ" ಗ್ರೂಪ್ ನೌಕರರು ಅಥವಾ ನೀರು ಕೊಡವವರು (ಒಂದು ದಿನಕ್ಕೆ) | 40 | 50 |
| 5 | ಒಬ್ಬ ವಿದ್ಯಾರ್ಥಿಗೆ ಸಾದಿಲ್ವಾರು (ಸಿ.ಜಿ) | 05 | 08 |
| 6 | ಪರೀಕ್ಷಾ ಸಾಮಾಗ್ರಿಗಳನ್ನು ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗುವ ಮುಖ್ಯ ಅಧೀಕ್ಷಕರು. ಶಿಕ್ಷಕರಿಗೆ ನೀಡುವ ಪ್ರಯಾಣ ಭತ್ಯೆ | 150 | 150 |
| | ಪ್ರತೀ ವರ್ಷ ಶೇ 5% ರಷ್ಟು ಹೆಚ್ಚಿಸುವುದು. | | |

| (ಉ) | ಮೌಲ್ಯಮಾಪನ ಕೇಂದ್ರದ ಭತ್ಯೆಗಳು (ಸಾಹಿತ್ಯ & ವೇದ ಮೂಲ) | ಪ್ರಸ್ತುತ | ಪರಿಷ್ಕೃತ |
|---|---|---|---|
| 1 | ಜಂಟಿ ಮುಖ್ಯಮೌಲ್ಯಮಾಪನಾಧಿಕಾರಿಗಳ ಭತ್ಯೆ | 3500 | 4000 |
| 2 | ಉಪಮುಖ್ಯ ಮೌಲ್ಯಮಾಪನಾಧಿಕಾರಿಗಳ ಭತ್ಯೆ | 3000 | 3500 |
| 3 | ಜಂಟಿ ಮುಖ್ಯಮೌಲ್ಯಮಾಪನಾಧಿಕಾರಿಗಳ ದಿನಭತ್ಯೆ | 300 | 400 |
| 4 | ಉಪಮುಖ್ಯ ಮೌಲ್ಯಮಾಪನಾಧಿಕಾರಿಗಳ ದಿನಭತ್ಯೆ | 300 | 400 |
| 5 | ಸಹಾಯಕ ಮೌಲ್ಯಮಾಪಕರ ದಿನಭತ್ಯೆ | 200 | 400 |
| 6 | ಸಹಾಯಕ ಮೌಲ್ಯಮಾಪಕರ ಸ್ಥಳೀಯ ಭತ್ಯೆ | 250 | 250 |
| 7 | ಕಛೇರಿ ಸಹಾಯಕರ ಸಂಭಾವನೆ (ಎಲ್ಲಾ ಭತ್ಯೆಗಳನ್ನೊಳಗೊಂಡಂತೆ) | 800 | 900 |
| 8 | "ಡಿ" ಗ್ರೂಪ್ ನೌಕರರ ಸಂಭಾವನೆ (ಎಲ್ಲಾ ಭತ್ಯೆಗಳನ್ನೊಳಗೊಂಡಂತೆ) | 650 | 700 |
| | ಪ್ರತೀ ವರ್ಷ ಶೇ 5% ರಷ್ಟು ಹೆಚ್ಚಿಸುವುದು. | | |

| (ಊ) | ಮೌಲ್ಯಮಾಪನ ಕೇಂದ್ರದ ಭತ್ಯೆಗಳು (ಪ್ರಥಮಾ, ಕಾವ್ಯ, ವೇದ ಪ್ರಥಮ & ವೇದ ಪ್ರವೇಶ) | ಪ್ರಸ್ತುತ | ಪರಿಷ್ಕೃತ |
|---|---|---|---|
| 1 | ಜಂಟಿ ಮುಖ್ಯಮೌಲ್ಯಮಾಪನಾಧಿಕಾರಿಗಳು | 3500 | 4000 |
| 2 | ಉಪಮುಖ್ಯ ಮೌಲ್ಯಮಾಪನಾಧಿಕಾರಿಗಳು | 3000 | 3500 |
| 3 | ಜಂಟಿ ಮುಖ್ಯಮೌಲ್ಯಮಾಪನಾಧಿಕಾರಿಗಳ ದಿನಭತ್ಯೆ | 200 | 300 |
| 4 | ಉಪಮುಖ್ಯ ಮೌಲ್ಯಮಾಪನಾಧಿಕಾರಿಗಳ ದಿನಭತ್ಯೆ | 200 | 300 |
| 5 | ಸಹಾಯಕ ಮೌಲ್ಯಮಾಪಕರ ದಿನಭತ್ಯೆ | 200 | 300 |
| 6 | ಕಛೇರಿ ಸಹಾಯಕರ ಸಂಭಾವನೆ (ಎಲ್ಲಾ ಭತ್ಯೆಗಳನ್ನೊಳಗೊಂಡಂತೆ) | 800 | 900 |
| 7 | "ಡಿ" ಗ್ರೂಪ್ ನೌಕರರ ಸಂಭಾವನೆ (ಎಲ್ಲಾ ಭತ್ಯೆಗಳನ್ನೊಳಗೊಂಡಂತೆ) | 650 | 700 |
| | ಪ್ರತೀ ವರ್ಷ ಶೇ 5% ರಷ್ಟು ಹೆಚ್ಚಿಸುವುದು. | | |

| | | ಪ್ರಸ್ತುತ | ಪರಿಷ್ಕೃತ |
|---|---|---|---|
| (ಋ) | ಉತ್ತರ ಪತ್ರಿಕೆಗಳ ಮೌಲ್ಯಮಾಪನ ಭತ್ಯೆಗಳು (ಒಂದು ಪತ್ರಿಕೆಗೆ) | 5 | 10 |
| 1 | ಪ್ರಥಮಾ / ವೇದ ಪ್ರಥಮಾ | 7 | 12 |
| 2 | ಕಾವ್ಯ / ವೇದ ಪ್ರವೇಶ (ಸಂಸ್ಕೃತ / ಕನ್ನಡ) | 7 | 12 |
| 3 | ಕಾವ್ಯ / ವೇದ ಪ್ರವೇಶ (ಆಂಗ್ಲ/ ಹಿಂದಿ) | 7 | 12 |
| 4 | ಕಾವ್ಯ / ವೇದ ಪ್ರವೇಶ (ಪತ್ರಿಕೆಗಳು) | 10 | 15 |
| 5 | ಸಾಹಿತ್ಯ / ವೇದ ಮೂಲ (ಸಂಸ್ಕೃತ / ಕನ್ನಡ) | 10 | 15 |
| 6 | ಸಾಹಿತ್ಯ / ವೇದ ಮೂಲ (ಆಂಗ್ಲ/ ಹಿಂದಿ) | 10 | 15 |
| 7 | ಸಾಹಿತ್ಯ / ವೇದ ಮೂಲ (ಪತ್ರಿಕೆಗಳು) | | |
| | ಪ್ರತೀ 3 ವರ್ಷಕ್ಕೆ ಶೇ 5% ರಷ್ಟು ಹೆಚ್ಚಿಸುವುದು. | | |

| | | ಪ್ರಸ್ತುತ | ಪರಿಷ್ಕೃತ |
|---|---|---|---|
| (ಎ) | ವಲಸೆ ಪ್ರಮಾಣ ಪತ್ರ | – | 500 |
| 1 | ಸಾಹಿತ್ಯ / ವೇದ ಮೂಲ ತರಗತಿಯ ನಂತರ ಉನ್ನತ ಶಿಕ್ಷಣಕ್ಕಾಗಿ ಮಾತ್ರ | | |

| | | ಪ್ರಸ್ತುತ | ಪರಿಷ್ಕೃತ |
|---|---|---|---|
| (ಏ) | ಕಾರ್ಯಕ್ರಮ/ತರಬೇತಿಯಲ್ಲಿ ನೀಡುವ ಭತ್ಯೆಗಳು | – | 2000 |
| 1 | ಕಾರ್ಯಕ್ರಮ/ತರಬೇತಿಗೆ ಆಗಮಿಸುವ ಅತಿಥಿಗಳ ಗೌರವ ಸಂಭಾವನೆ | | |
| 2 | ಕಾರ್ಯಕ್ರಮ/ತರಬೇತಿಯಲ್ಲಿ ವಿಶೇಷೋಪನ್ಯಾಸವನ್ನು ನೀಡಲು ಆಗಮಿಸುವ ಉಪನ್ಯಾಸಕರ ಸಂಭಾವನೆ | – | 2000 |
| 3 | ಕಾರ್ಯಕ್ರಮ/ತರಬೇತಿಯಲ್ಲಿ ಸಾಮಾನ್ಯ ಉಪನ್ಯಾಸವನ್ನು ನೀಡಲು ಆಗಮಿಸುವ ಉಪನ್ಯಾಸಕರ ಸಂಭಾವನೆ | – | 1000 |
| 4 | ವಿಶ್ವವಿದ್ಯಾಲಯ/ನಿರ್ದೇಶನಾಲಯ ಇರುವ ಸ್ಥಳದಿಂದ ಹೊರಗಿನ ಸ್ಥಳದಲ್ಲಿ ಕಾರ್ಯಕ್ರಮ/ತರಬೇತಿಯಲ್ಲಿ ಉಪನ್ಯಾಸವನ್ನು ನೀಡಲು ಆಗಮಿಸುವ ವಿಶ್ವವಿದ್ಯಾಲಯದ ವಿದ್ವಾಂಸರುಗಳಿಗೆ ನೀಡುವ ಸಂಭಾವನೆ (ಪ್ರತ್ಯೇಕವಾಗಿ ಸಾಮಾನ್ಯ ಬಸ್ ದರವನ್ನು ನೀಡುವುದು) | – | 1000 |
| 5 | ಕಾರ್ಯಕ್ರಮ/ತರಬೇತಿಗೆ ಆಗಮಿಸುವ ಅತಿಥಿಗಳು/ವಿದ್ವಾಂಸರುಗಳಿಗೆ ಪ್ರಯಾಣ ಭತ್ಯೆ (ಪ್ರತೀ ಕಿ.ಮೀ.ಗೆ) | – | ರೂ. 8.00 |

| | |
|---|---|
| **ನಿರ್ಣಯ** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಪಟ್ಟ ಭತ್ಯೆಗಳನ್ನು ಪರಿಷ್ಕರಿಸಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಹಾಗೂ ವಿಶ್ವವಿದ್ಯಾಲಯದ ಆರ್ಥಿಕ ಸಂಪನ್ಮೂಲವು ವೃದ್ಧಿಸಿದಲ್ಲಿ ಸದರಿ ದರಗಳನ್ನು ಪುನಃ ಹೆಚ್ಚಿಸುವಂತೆ ಸೂಚಿಸಿತು.** |
| **ವಿಷಯ 12** | **UUCMS ನಲ್ಲಿ Server error ಇರುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಅಧಿಕೃತ Email ಮೂಲಕ ಪ್ರಶ್ನೆ ಪತ್ರಿಕೆಗಳನ್ನು ವಿತರಿಸುವ ಕುರಿತು.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕಳೆದ ಎರಡು ವರ್ಷಗಳಿಂದ UUCMS ನ OQPDS ಮೂಲಕ ಪ್ರಶ್ನೆಪತ್ರಿಕೆಗಳನ್ನು ವಿತರಿಸುತ್ತಿದ್ದು ರಾಜ್ಯದಲ್ಲಿ UUCMS ಮೂಲಕ ಪ್ರಶ್ನೆಪತ್ರಿಕೆಗಳನ್ನು ವಿತರಿಸಿದ ಮೊದಲ ವಿಶ್ವವಿದ್ಯಾಲಯವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವಾಗಿದೆ. ದಿನಾಂಕ 07.01.2025ರಿಂದ ನಡೆಯುವ ಷಾಣ್ಮಾಸಿಕ ಪರೀಕ್ಷೆಗಳಿಗೂ UUCMS ಮೂಲಕವೇ ಪ್ರಶ್ನೆಪತ್ರಿಕೆಳನ್ನು ಕಳುಹಿಸಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಆದರೆ ಕಳೆದ ಕೆಲವು ದಿನಗಳಿಂದ UUCMS ನಲ್ಲಿ server ಸಮಸ್ಯೆಯು ಪದೇ ಪದೇ ಕಾಣಿಸಿಕೊಳ್ಳುತ್ತಿರುವುದರಿಂದ ಪರೀಕ್ಷೆಯು ಸುಸೂತ್ರವಾಗಿ ನಡೆಯಲು ಅನಿವಾರ್ಯ ಸಂದರ್ಭದಲ್ಲಿ ಡಿಜಿಟಲ್ ಮೋಡ್ ಮೂಲಕ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಲು ಇನ್ನೊಂದು ಮಾರ್ಗವನ್ನೂ ಆಶ್ರಯಿಸಬೇಕಾಗಬಹುದು. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವರ Email IDಯಿಂದ ಮಹಾವಿದ್ಯಾಲಯಗಳ ಪ್ರಾಂಶುಪಾಲರ Email ID ಗೆ ಕಳುಹಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ವಿಷಯವನ್ನು ಮಂಡಿಸಿದೆ. |
| **ನಿರ್ಣಯ** | **ವಿದ್ಯಾರ್ಥಿಗಳ ಹಿತದೃಷ್ಟಿಯಿಂದ UUCMS ನಲ್ಲಿ Server Error ಇರುವ ಸಂದರ್ಭದಲ್ಲಿ ಮಾತ್ರ ವಿಶ್ವವಿದ್ಯಾಲಯದ ಅಧಿಕೃತ Email ಮೂಲಕ ಪ್ರಶ್ನೆ ಪತ್ರಿಕೆಗಳನ್ನು ಸಂಬಂಧಿಸಿದ ಪ್ರಾಂಶುಪಾಲರ Email ID ಗೆ ಕಳುಹಿಸಲು ಸಭೆಯು ಅನುಮೋದಿಸಿತು.** |

| | |
|---|---|
| ವಿಷಯ 13 | ಶ್ರೀ ಪ್ರಕಾಶ್ ಆರ್ ಪಾಗೋಜಿ ಹಾಗೂ ಶ್ರೀ ಎಂ ಶಿವಮೂರ್ತಿ ಇವರ ಕೇಸಿನ ಬಗ್ಗೆ. |
| ಟಿಪ್ಪಣಿ | ಶ್ರೀ ಪ್ರಕಾಶ್ ಆರ್ ಪಾಗೋಜಿರವರು ಮತ್ತು ಶ್ರೀ ಎಂ. ಶಿವಮೂರ್ತಿರವರು ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ರಿಟ್ ಅಪೀಲು ಸಲ್ಲಿಸಿದ್ದು, (ಅಪೀಲು ಸಂಖ್ಯೆ WA – 1590/2023 ಮತ್ತು WA – 1591/2023) ದಿನಾಂಕ: 15.12.2023ರ ಮಾನ್ಯ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ಆದೇಶಕ್ಕೆ ದಿನಾಂಕ: 26.12.2023 ರಂದು ವಿಭಾಗೀಯ ಪೀಠವು ತಡೆಯಾಜ್ಞೆ ನೀಡಿರುತ್ತದೆ. ದಿನಾಂಕ: 20.12.2024ರಂದು ಮಾನ್ಯ ವಿಭಾಗೀಯ ಪೀಠವು ಸದರಿ ರಿಟ್ ಅಪೀಲುಗಳನ್ನು ವಜಾಗೊಳಿಸಿದೆ.<br><br>ಈ ಬಗ್ಗೆ ಘನ ಸರ್ವೋಚ್ಚ ನ್ಯಾಯಾಲಯಕ್ಕೆ ವಿಶ್ವವಿದ್ಯಾಲಯವು SLP ಸಲ್ಲಿಸಲು ವಿಶ್ವದ್ಯಾಲಯದ ಕಾನೂನು ಸಲಹೆಗಾರರಾದ ಕುಮಾರ್ & ಕುಮಾರ್ ಅವರು ದಿನಾಂಕ: 06.01.2025ರಂದು ಅಭಿಪ್ರಾಯ ನೀಡಿರುತ್ತಾರೆ. ಈ ಬಗ್ಗೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿಗೆ ಪ್ರಶಾಸನ ಸಮಿತಿಯು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಸದರಿ ಪ್ರಕರಣದಲ್ಲಿಯೂ ಸಹ ಸಕ್ಷಮ ಪ್ರಾಧಿಕಾರದ ಅನುಮೋದನೆಯಂತೆ ವಿಶ್ವವಿದ್ಯಾಲಯವೇ ನೇಮಕಾತಿ ಮಾಡಿಕೊಂಡಿರುವುದರಿಂದ ಮತ್ತು ಸಿಬ್ಬಂದಿಗಳ ಹಿತದೃಷ್ಟಿಯಿಂದ ತನ್ನ ನಿಲುವನ್ನು ವಿಶ್ವವಿದ್ಯಾಲಯವು ಸಮರ್ಥಿಸಿಕೊಳ್ಳಬೇಕು. ಆದ್ದರಿಂದ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಘನ ಸರ್ವೋಚ್ಚ ನ್ಯಾಯಾಲಯಕ್ಕೆ ವಿಶ್ವವಿದ್ಯಾಲಯವು SLP ಸಲ್ಲಿಸಲು ಸಭೆಯು ಬಹುಮತದ ತೀರ್ಮಾನವನ್ನು ಕೈಗೊಂಡಿತು.<br>ಸದಸ್ಯ ಕಾರ್ಯದರ್ಶಿಗಳಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರು "ಕರ್ನಾಟಕ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠ ಮತ್ತು ದ್ವಿಸದಸ್ಯ ಪೀಠದಲ್ಲಿ ವಿಶ್ವವಿದ್ಯಾಲಯವು ಪ್ರತಿವಾದಿಯಾಗಿರುವುದರಿಂದ ಪ್ರಸ್ತುತ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯವು ವಾದಿಯಾಗಿ SLP ಸಲ್ಲಿಸುವುದು ಸೂಕ್ತವಲ್ಲ. ಆದರೆ ಸದರಿ ಪ್ರಕರಣದಲ್ಲಿ ಏಕ ಸದಸ್ಯ ಪೀಠ ಮತ್ತು ದ್ವಿಸದಸ್ಯ ಪೀಠದಲ್ಲಿ ತಳೆದ ನಿಲುವನ್ನೇ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿಯೂ ತಳೆಯಬಹುದಾಗಿದೆ" ಎಂದು ಅಭಿಪ್ರಾಯಿಸಿ ವಿಶ್ವವಿದ್ಯಾಲಯದಿಂದ SLP ಸಲ್ಲಿಸಲು ತಮ್ಮ ಅಸಮ್ಮತಿಯನ್ನು ಸೂಚಿಸಿದರು.<br>ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯವು SLP ಸಲ್ಲಿಸಲು ಹಾಗೂ Affidavit ಹಾಕಲು ವಿಶ್ವವಿದ್ಯಾಲಯದ ಉಪಕುಲಸಚಿವರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿ ಪ್ರಶಾಸನ ಸಮಿತಿಯು ಬಹುಮತದ ನಿರ್ಣಯ ಕೈಗೊಂಡಿತು. |
| ವಿಷಯ 14 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗೆ ಅಧಿಕ ಪ್ರಭಾರದಲ್ಲಿರಿಸಿರುವುದಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ. |
| ಟಿಪ್ಪಣಿ | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆ ಪ್ರಸ್ತುತ ಖಾಲಿ ಇದೆ. ನಿರ್ದೇಶನಾಲಯದ ವಿಭಾಗದಲ್ಲಿ ಹೆಚ್ಚುವರಿ ಕೆಲಸ ಕಾರ್ಯಗಳ ನಿರ್ವಹಣೆಗೆ ಅನುಕೂಲವಾಗುವಂತೆ ಡಾ. ಲೋಕೇಶ್ ವಿ. ಹೆಚ್., ಹಿರಿಯ ಸಹಾಯಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ(68)ರಂತೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪತ್ರಾಂಕಿತ ವ್ಯವಸ್ಥಾಪಕ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿ ಆದೇಶಿಸಿದೆ.<br>ಈ ಬಗ್ಗೆ ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | ಡಾ. ಲೋಕೇಶ್ ವಿ. ಹೆಚ್., ಹಿರಿಯ ಸಹಾಯಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ(68)ರಂತೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪತ್ರಾಂಕಿತ ವ್ಯವಸ್ಥಾಪಕ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿರುವುದನ್ನು ಸಭೆಯು ಅನುಮೋದಿಸಿತು. |
| ವಿಷಯ 15 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಸ್ಥಾನಾಪನ್ನ ಪದೋನ್ನತಿ ನೀಡಿರುವುದಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ. |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಖಾಲಿ ಇರುವ "ಶಾಖಾಧಿಕಾರಿ" ಹುದ್ದೆಗೆ ಹಿರಿಯ ಸಹಾಯಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಚಂದ್ರಶೇಖರ್ ಸಿ. ಪಾಟೀಲ್ ಇವರಿಗೆ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನಂತೆ ಶಾಖಾಧಿಕಾರಿ ಹುದ್ದೆಗೆ ಹಿರಿಯ ಸಹಾಯಕರ ಹುದ್ದೆಯಿಂದ ಸ್ಥಾನಾಪನ್ನ ಪದೋನ್ನತಿ ನೀಡಿ ಆದೇಶಸಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಖಾಲಿ ಇರುವ ಅಡುಗೆಯವರ ಹುದ್ದೆಗೆ ಅಡುಗೆ ಸಹಾಯಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕು। ಮಂಗಳಾ ಎಂ. ಇವರಿಗೆ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನಂತೆ ಅಡುಗೆಯವರ ಹುದ್ದೆಗೆ ಅಡುಗೆ ಸಹಾಯಕರ ಹುದ್ದೆಯಿಂದ ಸ್ಥಾನಾಪನ್ನ ಪದೋನ್ನತಿ ನೀಡಿ ಆದೇಶಸಿದೆ.<br>ಈ ಮೇಲ್ಕಂಡ ಸಿಬ್ಬಂದಿಗೆ ಸ್ಥಾನಾಪನ್ನ ಪದೋನ್ನತಿ ನೀಡಿ ಆದೇಶಿಸಲಾಗಿದ್ದು ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಶ್ರೀ ಚಂದ್ರಶೇಖರ್ ಸಿ. ಪಾಟೀಲ್ ಇವರಿಗೆ ಹಿರಿಯ ಸಹಾಯಕರ ಹುದ್ದೆಯಿಂದ ಶಾಖಾಧಿಕಾರಿ ಹುದ್ದೆಗೆ ಮತ್ತು ಕು॥ ಮಂಗಳಾ ಎಂ. ಇವರಿಗೆ ಅಡುಗೆ ಸಹಾಯಕರ ಹುದ್ದೆಯಿಂದ ಅಡುಗೆಯವರ ಹುದ್ದೆಗೆ ಸ್ಥಾನಾಪನ್ನ ಪದೋನ್ನತಿ ನೀಡಿರುವುದನ್ನು ಸಭೆಯು ಅನುಮೋದಿಸಿತು.** |
| ವಿಷಯ 16 | **'ಆಯುರ್ವೇದ ಗುರುಕುಲಮ್' ಎಂಬ 7 ½ ವರ್ಷಗಳ ಆಯುರ್ವೇದ ಶಿಕ್ಷಣ ಪದ್ಧತಿಯನ್ನು ಆರಂಭಿಸುವ ಬಗ್ಗೆ.** |
| ಟಿಪ್ಪಣಿ | ಆಯುಕ್ತರು, ಆಯುಷ್ ಇಲಾಖೆ ಇವರು ದಿನಾಂಕ: 31.12.2024ರ ಪತ್ರದಲ್ಲಿ 2 ವರ್ಷಗಳ (10+2) Pre-Ayurveda Programme ಮತ್ತು 5 ½ ವರ್ಷಗಳ ಬಿ.ಎ.ಎಂ.ಎಸ್. ಪದವಿ ಶಿಕ್ಷಣಗಳನ್ನು ಒಳಗೊಂಡಂತೆ. ಒಟ್ಟು 7 ½ ವರ್ಷಗಳ 'ಆಯುರ್ವೇದ ಗುರುಕುಲಮ್' ಎಂಬ ಆಯುರ್ವೇದ ಶಿಕ್ಷಣ ಪದ್ಧತಿಯನ್ನು ಕರ್ನಾಟಕದಲ್ಲಿ ಹೊಸದಾಗಿ ಆರಂಭಿಸುವ ಬಗ್ಗೆ ಪತ್ರಿಸಿದ್ದು, ಆಯುರ್ವೇದ ವೈದ್ಯಕೀಯವನ್ನು ಅರ್ಥ ಮಾಡಿಕೊಳ್ಳಲು ಎಲ್ಲಾ ಮೂಲ ಗ್ರಂಥಗಳು ಸಂಸ್ಕೃತ ಮಾಧ್ಯಮದಲ್ಲಿಯೇ ಇರುವುದರಿಂದ ಸಂಸ್ಕೃತ ಜ್ಞಾನವು ಅವಶ್ಯಕವಾಗಿದೆ. ಸಂಸ್ಕೃತವು ಭಾರತೀಯ ಪುರಾತನ ಭಾಷೆಯಾಗಿದ್ದು, ಆಯುರ್ವೇದ ಪುರಾತನ ಭಾರತೀಯ ವೈದ್ಯ ಪದ್ಧತಿಯಾಗಿದೆ.<br>ಸಂಸ್ಕೃತ ಅಧ್ಯಯನವೂ ಕೂಡ ಗುರುಗುಲ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ವಿಶ್ವವಿದ್ಯಾಲಯದ ನೂತನ Campus ನಲ್ಲಿಯೇ ಆಯುರ್ವೇದ ಗುರುಕುಲಮ್ ಅನ್ನು ಆರಂಭಿಸಿದರೆ ಈ ಕೆಳಗಿನ ಅನುಕೂಲಗಳು ಆಗಬಹುದಾಗಿದೆ.<br>1. ಆಯುರ್ವೇದ ಮತ್ತು ಸಂಸ್ಕೃತ ಇವೆರಡೂ ಸಂಪ್ರದಾಯಗಳನ್ನೂ, ವೈಜ್ಞಾನಿಕತೆಗಳನ್ನೂ ಉನ್ನತ ಮಟ್ಟದಲ್ಲಿ ಅಭಿವೃದ್ಧಿಗೊಳಿಸಬಹುದು.<br>2. ಸಂಸ್ಕೃತ ಭಾಷಾಜ್ಞಾನವುಳ್ಳ ಅಧ್ಯಾಪಕರುಗಳನ್ನು ಆಯುರ್ವೇದ ಅಧ್ಯಯನಕ್ಕೆ ಬಳಸಿಕೊಳ್ಳಬಹುದು.<br>3. ಸಾಧ್ಯವಾದಷ್ಟು ಮೂಲಭೂತ ಸೌಕರ್ಯಗಳನ್ನು ಜಂಟಿಯಾಗಿ ಉಪಯೋಗಿಸಿಕೊಂಡು ಸರ್ಕಾರಕ್ಕೆ, ಆಗಬಹುದಾದ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬಹುದು.<br>4. ರಾಜಧಾನಿ ಬೆಂಗಳೂರಿಗೆ ಸಮೀಪವಿರುವುದರಿಂದ ಮತ್ತು ಮುಖ್ಯ ರಸ್ತೆಗೂ (ಬೆಂಗಳೂರು-ಹಾಸನ ಹೆದ್ದಾರಿ) ಹತ್ತಿರವಿರುವುದರಿಂದ ಸಂಪರ್ಕ ವ್ಯವಸ್ಥೆಗೆ ಅನುಕೂಲವಾಗುತ್ತದೆ ಮತ್ತು ಶೀಘ್ರ ಅಭಿವೃದ್ಧಿ ಹೊಂದಲು ಸಹಾಯಕವಾಗುತ್ತದೆ.<br>5. Green campus ಅಭಿವೃದ್ಧಿಗೊಳಿಸಬಹುದಾಗಿದೆ.<br>ಆದ್ದರಿಂದ **'ಆಯುರ್ವೇದ ಗುರುಕುಲಮ್'** ಎಂಬ Pre-Ayurveda Programme ನೊಂದಿಗೆ ಬಿ.ಎ.ಎಂ.ಎಸ್ ಪದವಿ ಶಿಕ್ಷಣವನ್ನು ಆರಂಭಿಸಲು ಕನಿಷ್ಠ 15 ಎಕರೆಗಳಷ್ಟು ಸ್ಥಳದ ಅವಶ್ಯಕತೆಯಿದ್ದು, ವಿಶ್ವವಿದ್ಯಾಲಯದ ನೂತನ campus ನಲ್ಲಿ ಹೊಸ |

| | |
|---|---|
| | ಮಾದರಿಯ ಆಯುರ್ವೇದ ಶಿಕ್ಷಣ ಪದ್ಧತಿಯನ್ನು ಆರಂಭಿಸುವ ಬಗ್ಗೆ ವಿಶ್ವವಿದ್ಯಾಲಯದ ಅಭಿಪ್ರಾಯ ಕೋರಿರುತ್ತಾರೆ. ಸದರಿ ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ-2009ರ ಉಪಬಂಧ 3(5) ಮತ್ತು (6)ರಂತೆ ವಿಶ್ವವಿದ್ಯಾಲಯವು ಚರ-ಚಿರಾಸ್ತಿಯನ್ನು ಹೊಂದಲು, ಭೋಗ್ಯ ಮತ್ತು ಪರಭಾರೆ ಮಾಡಲು ಸಕ್ಷಮವಾಗಿದೆ. ಆಯುರ್ವೇದ ಮತ್ತು ಸಂಸ್ಕೃತ ಪರಸ್ಪರ ಪೂರಕ. ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನ ಮಾದರಿಯ ಆಯುರ್ವೇದ ಗುರುಕುಲವು ಆರಂಭವಾದಲ್ಲಿ ಸಂಸ್ಕೃತ ಬೆಳವಣಿಗೆಗೆ ಪ್ರೋತ್ಸಾಹ ಸಿಗುತ್ತದೆ. ಅಲ್ಲದೇ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಬೆಳವಣಿಗೆಯ ದೃಷ್ಟಿಯಿಂದ ತನ್ನ ಜಮೀನನನ್ನು ಬಳಸಿಕೊಳ್ಳಬೇಕು. ಆದ್ದರಿಂದ ನೂತನ ಮಾದರಿಯ "ಆಯುರ್ವೇದ ಗುರುಕುಲಮ್" ಎಂಬ 7 ½ ವರ್ಷಗಳ ಆಯುರ್ವೇದ ಶಿಕ್ಷಣ ಪದ್ಧತಿಯನ್ನು ಆರಂಭಿಸಲು ವಿಶ್ವವಿದ್ಯಾಲಯದ ನೂತನ campus ನಲ್ಲಿ 10 ಎಕರೆ ಜಮೀನನ್ನು ನಿಯಮಾನುಸಾರ ಸರ್ಕಾರದ ಅನುಮೋದನೆ ಪಡೆದು 30 ವರ್ಷಗಳ ಅವಧಿಗೆ Lease ಆಧಾರದಲ್ಲಿ ನೀಡಬಹುದು ಹಾಗೂ ಉಪಯುಕ್ತತೆಯ ಆಧಾರದಲ್ಲಿ ಸದರಿ Lease ಅವಧಿಯನ್ನು ಮುಂದುವರಿಸಬಹುದು ಎಂದು ಸಭೆಯು ತೀರ್ಮಾನಿಸಿತು.** |
| ವಿಷಯ 17 | **ಮಹಾಬೋಧಿ ಸಂಸ್ಥೆಗೆ ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸಲು ಸುಮಾರು 10 ಎಕರೆಗಳಷ್ಟು ಸ್ಥಳಾವಕಾಶವನ್ನು ಮಾಡಿಕೊಡುವ ಬಗ್ಗೆ.** |
| ಟಿಪ್ಪಣಿ | ಮಹಾಬೋಧಿ ಸಂಸ್ಥೆಯು ಬೌದ್ಧಧರ್ಮ ಹಾಗೂ ಪಾಲಿ ಮತ್ತು ತ್ರಿಪಿಟಕಗಳ ಜ್ಞಾನ ಪ್ರಸಾರಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಯು ದಿನಾಂಕ: 25.11.2024ರ ಪತ್ರದಲ್ಲಿ – 'ಸಂಸ್ಕೃತ, ಪ್ರಾಕೃತ ಮತ್ತು ಪಾಲಿ ಭಾಷೆಗಳು ಭಾರತದ ಅತ್ಯಂತ ಪ್ರಾಚೀನ ಭಾಷೆಗಳು, ಅವುಗಳಲ್ಲಿ ಭಾರತದ ಹೆಮ್ಮೆಯ ಪರಂಪರೆ ಮತ್ತು ಸಂಸ್ಕೃತಿ, ಅಪಾರವಾದ ಜ್ಞಾನ ಭಂಡಾರ ಇದೆ. ಇತ್ತೀಚೆಗೆ ಪಾಲಿ ಭಾಷೆಗೆ ಕೇಂದ್ರ ಸರ್ಕಾರವು ಶಾಸ್ತ್ರೀಯ ಸ್ಥಾನಮಾನವನ್ನು ನೀಡಿ ಗೌರವಿಸಿದೆ. ಭಾರತದ ರಾಷ್ಟ್ರಪತಿಗಳು ಈಚೆಗೆ ನವದೆಹಲಿಯಲ್ಲಿ ನಡೆದ ಏಷಿಯನ್ ಬುದ್ಧಿಸ್ಟ್ ಸಮಿಟ್ ಉದ್ದೇಶಿಸಿ ಪಾಲಿ ಭಾಷೆಯನ್ನ ಉಳಿಸಿ ಬೆಳಸುವುದು ಎಲ್ಲರ ಕರ್ತವ್ಯ ಎಂದು ತಿಳಿಸಿದ್ದಾರೆ.<br>ಮಹಾಬೋಧಿ ಸಂಸ್ಥೆಯ ಬುದ್ಧ-ಧಮ್ಮ ಮತ್ತು ಪಾಲಿ ಭಾಷೆ ಅಧ್ಯಯನ ಕೇಂದ್ರಕ್ಕೆ ಸಂಸ್ಕೃತ ವಿಶ್ವವಿದ್ಯಾಲಯವು ಮಾನ್ಯತೆ ನೀಡಿದೆ. ನಮ್ಮ ಮಹಾಬೋಧಿ ಸಂಸ್ಥೆಯು ಬೆಂಗಳೂರಿನಲ್ಲಿ ಆರು ದಶಕಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಬುದ್ಧ-ಧಮ್ಮ ಮತ್ತು ಪಾಲಿ ಭಾಷಾ ಸಂಸ್ಥೆ ಹಾಗು ತಿಪಿಟಕದ ಜ್ಞಾನವನ್ನು ತಿಳಿಸಲು, ಸಂಸ್ಕೃತ ಕಾರ್ಯನಿರ್ವಹಿಸಲು ಮಹಾಬೋಧಿ ಸಂಸ್ಥೆಗೆ ಸುಮಾರು 10 ಎಕರೆಗಳಷ್ಟು ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ಥಳಾವಕಾಶವನ್ನು ಮಾಡಿಕೊಡಬೇಕು' ಎಂದು ಕೋರಿರುತ್ತಾರೆ. ಸದರಿ ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿ, ಪಾಳಿ, ಬುದ್ಧ ಧರ್ಮವು ಸಂಸ್ಕೃತ ಸಂಬಂಧಿ ಕ್ಷೇತ್ರವಾಗಿವೆ. ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಪಾಳೀ ಮತ್ತು ಬುದ್ಧ ಧರ್ಮದ ಅಧ್ಯಯನದಿಂದ ಸಂಸ್ಕೃತ ಬೆಳವಣಿಗೆಗೆ ಪ್ರೋತ್ಸಾಹ ಸಿಗುತ್ತದೆ. ಆದ್ದರಿಂದ ವಿಶ್ವವಿದ್ಯಾಲಯದ ನೂತನ campus ನಲ್ಲಿ ಜಮೀನಿನ ಮಾಲೀಕತ್ವವನ್ನು ವಿಶ್ವವಿದ್ಯಾಲಯದಲ್ಲಿಯೇ ಉಳಿಸಿಕೊಂಡು ನಿಯಮಾನುಸಾರ ಸರ್ಕಾರದ ಅನುಮೋದನೆ ಪಡೆದು 30 ವರ್ಷಗಳ ಅವಧಿಗೆ Lease ಆಧಾರದಲ್ಲಿ ಮಹಾಬೋಧಿ ಸಂಸ್ಥೆಗೆ 05 ಎಕರೆ ಜಮೀನನ್ನು ನೀಡಬಹುದು ಎಂದು ಸಭೆಯು ತೀರ್ಮಾನಿಸಿತು.** |
| ವಿಷಯ 18 | **ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯ, ಗುಜರಾತ ಇದರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಬಗ್ಗೆ.** |
| ಟಿಪ್ಪಣಿ | ಗುಜರಾತಿನ ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯವು ಉತ್ತಮ ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದೆ. ಇಲ್ಲಿ ವ್ಯಾಕರಣ, ವೇದಾಂತ ಮೊದಲಾದ ಶಾಸ್ತ್ರಗಳ ಅಧ್ಯಯನಕ್ಕೆ ಉತ್ತಮ ಅವಕಾಶಗಳಿವೆ. ಆದ್ದರಿಂದ ವಿದ್ಯಾರ್ಥಿಗಲ ವಿನಿಮಯ ಮೊದಲಾದ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಈ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ |

| | |
|---|---|
| | ಒಡಂಬಡಿಕೆಯನ್ನು ಮಾಡಿಕೊಂಡಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯ, ಗುಜರಾತ ಇದರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಭೆಯು ಅನುಮೋದಿಸಿತು. |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು** |
| **01** | ಮೂರು ವರ್ಷಗಳಿಗೊಮ್ಮೆ ವಿಭಾಗದ ಮುಖ್ಯಸ್ಥರನ್ನು ಬದಲಾಯಿಸುವ ಕುರಿತು. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಭಾಗಗಳ ಮುಖ್ಯಸ್ಥರನ್ನು ಮೂರು ವರ್ಷಗಳಿಗೊಮ್ಮೆ ಬದಲಾಯಿಸಲು ಪ್ರಶಾಸನ ಸಮಿತಿಯ ಒಪ್ಪಿಗೆಗೆ ಮಂಡಿಸಿದೆ. |
| ನಿರ್ಣಯ | ಮೂರು ವರ್ಷಗಳಿಗೊಮ್ಮೆ ವಿಭಾಗದ ಮುಖ್ಯಸ್ಥರನ್ನು ಬದಲಾಯಿಸಲು ಸಭೆಯು ಅನುಮೋದಿಸಿತು. |

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಂತರ್ವಿಶ್ವವಿದ್ಯಾಲಯ ಕ್ರೀಡಾ ಚಟುವಟಿಕೆಗಳಲ್ಲಿ ಬಹುಮಾನ ಪಡೆದಿರುವುದನ್ನು ಸಭೆಯು ಶ್ಲಾಘಿಸಿತು ಹಾಗೂ ವಿಶ್ವವಿದ್ಯಾಲಯವು ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳನ್ನು ಸಭೆಯು ಪ್ರಶಂಸಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.
ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಡಾ. ಅಹಲ್ಯಾ ಎಸ್.
ಕುಲಪತಿಗಳು
ಅಧ್ಯಕ್ಷರು